**ಕರ್ನಾಟಕ ಸರ್ಕಾರ**

ಸಂಖ್ಯೆ: ಎಸ್‌ಆರ್.ಸಿ/34/2015-16

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ
ನಿರ್ದೇಶನಾಲಯ, ಆನಂದರಾವ್ ವೃತ್ತ,
ಬೆಂಗಳೂರು, ದಿನಾಂಕ: 31.03.2017

# ಪ್ರಕಟಣೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ನಿರ್ದೇಶನಾಲಯವು ಹೊರಡಿಸಿದ ಅಧಿಸೂಚನೆಯ ಸಂಖ್ಯೆಎಸ್.ಆರ್.ಸಿ/ವಾಚಾನೇ/48/2012-13 ದಿನಾಂಕ 09.11.2015ರ ಅನುಗುಣವಾಗಿ ಖಾಲಿ ಇರುವ ವಾಹನ ಚಾಲಕರ ಹುದ್ದೆಗೆ ಆನ್-ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದ್ದು, ನಿಮ್ಮಆನ್-ಲೈನ್ ಅರ್ಜಿಯಲ್ಲಿ ನಮೂದಿಸಿದ ವಿವರಗಳ ಅನುಸಾರ ಎಲ್ಲಾ ಮೂಲದಾಖಲೆಗಳು ಮತ್ತು ಅವುಗಳ ಎರಡು ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಗಳೊಂದಿಗೆ ಪರಿಶೀಲನೆಗಾಗಿ **"ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಸಂಸ್ಥೆ, ಸೆಮಿನಾರ್ ಹಾಲ್, ಕುಷ್ಠರೋಗ ಆಸ್ಪತ್ರೆ ಆವರಣ, ಮಾಗಡಿ ರಸ್ತೆ ಬೆಂಗಳೂರು-560023** ಇಲ್ಲಿ ಈ ಕೆಳಕಂಡ ದಿನಾಂಕಗಳಂದು ಹಾಜರಾಗಲು ಸೂಚಿಸಲಾಗಿದೆ. **ಈ ಸಂಬಂಧ ಸಂಬಂಧಪಟ್ಟ ಅಭ್ಯರ್ಥಿಗಳ ವಿಳಾಸಗಳಿಗೆ ತಿಳುವಳಿಕೆ ಪತ್ರಗಳನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದೆ**. ಹಾಜರಾದ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳನ್ನು ನೀಡಲಾಗುವುದಿಲ್ಲ.

| Sl.No. | Date | Time | Verification SL.No. |
|---|---|---|---|
| 1 | 10.04.2017 | 9.00 AM | 3872-4216 |
| 2 | 11.04.2017 | 9.00 AM | 4217-4561 |
| 3 | 12.04.2017 | 9.00 AM | 4562-4906 |
| 4 | 13.04.2017 | 9.00 AM | 4907-4959<br>HK 918-HK 1208 |

**ಪರಿಶೀಲನೆಗೆ ಹಾಜರು ಪಡಿಸಬೇಕಾದ ಮೂಲ ದಾಖಲೆಗಳು:-**

1. ಜನ್ಮ ದಿನಾಂಕವನ್ನು ತೋರಿಸುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣಪತ್ರ / ಶಾಲಾ ವರ್ಗಾವಣೆ ಪ್ರಮಾಣ ಪತ್ರ/ ಜನ್ಮದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತಭಾಗ (Extract of Cumulative record).
2. ವಾಹನ ಚಾಲಕರ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಗೆ ಸಂಬಂಧಿಸಿದ ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆಯ ಮೂಲ ಪ್ರಮಾಣಪತ್ರ.
3. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 15.12.2015 ದೊಳಗೆ ಚಾಲ್ತಿಯಲ್ಲಿರುವ ಮೂಲ ಚಾಲನಾ ಪರವಾನಗಿ, PSV ಬ್ಯಾಡ್ಜ್ (ಅಧಿಸೂಚನೆಯಲ್ಲಿ ಸೂಚಿಸಿರುವಂತೆ).
4. **ರಾಜ್ಯಸರ್ಕಾರ ಅಥವಾ ಸರ್ಕಾರದಿಂದ ಮಾನ್ಯತೆ ಹೊಂದಿದ ಸಂಸ್ಥೆಗಳಲ್ಲಿ ಅಂದರೆ ಸರ್ಕಾರದ ಅನುದಾನಿತ ಸಂಸ್ಥೆಗಳಲ್ಲಿ ವಾಹನ ಚಾಲನೆಯಲ್ಲಿ ಕನಿಷ್ಠ 2 ವರ್ಷಗಳ ಅನುಭವ ಹೊಂದಿರುವ ಮೂಲ ಪ್ರಮಾಣ ಪತ್ರ (ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 15.12.2015 ರೊಳಗೆ ಪಡೆದಿರಬೇಕು) ಖಾಸಗಿ ಇನ್ನಿತರೆ ಸಂಸ್ಥೆಗಳ ಅನುಭವ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.**
5. **ಖಾಸಗಿ ಸಂಸ್ಥೆಗಳಿಂದ ಅನುಭವ ಪಡೆದಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.**

5. **ಜಾತಿ ಪ್ರಮಾಣ ಪತ್ರಗಳು:-**

ಅ) ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡದ ಅಭ್ಯರ್ಥಿಗಳು ನಮೂನೆ–ಡಿ
ಆ) ಪ್ರವರ್ಗ-1 ರ ಅಭ್ಯರ್ಥಿಗಳು ನಮೂನೆ–ಇ'
ಇ) ಪ್ರವರ್ಗ-2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ–ಎಫ್

ಮೇಲ್ಕಂಡ ಜಾತಿ ಪ್ರಮಾಣ ಪತ್ರಗಳನ್ನುಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 15.12.2015ರಳೊಗೆ ಚಾಲ್ತಿಯಲ್ಲಿರುವಂತೆ ಸಂಬಂಧಿಸಿದ ತಹಶೀಲ್ದಾರವರಿಂದ ಪಡೆದಿರಬೇಕು ದಿನಾಂಕ 15.12.2015 ರ ನಂತರ ಪಡೆಯಲಾದ ಮೀಸಲಾತಿ ಪ್ರಮಾಣ ಪತ್ರಗಳನ್ನು ಪರಿಗಣಿಸಲಾವುದಿಲ್ಲ.

**6. ಗ್ರಾಮೀಣ ಮೀಸಲಾತಿ:-**

01 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಪ್ರಮಾಣ ಪತ್ರವನ್ನು ಅಧಿಸೂಚನೆಯಲ್ಲಿನ ಅನುಬಂಧ-5ರ ನಮೂನೆಯಲ್ಲಿ ಮುಖ್ಯೋಪಧ್ಯಾಯರಿಂದ ಪಡೆದು ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲುರುಜು ಮಾಡಿಸಿರತಕ್ಕದ್ದು. ಸಾಮಾನ್ಯ ವರ್ಗದಡಿ ಗ್ರಾಮೀಣ ಮೀಸಲಾತಿ ಕೋರುವ ಅಭ್ಯರ್ಥಿಗಳು ಮೇಲು ಸ್ತರಕ್ಕೆ ಸೇರಿಲ್ಲವೆಂಬ ಬಗ್ಗೆ (Creamy Layer) ಸಂಬಧಿಸಿದ ಪ್ರಮಾಣ ಪತ್ರವನ್ನು ಅರ್ಜಿಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 15.12.2015ರೊಳಗೆ ಚಾಲ್ತಿಯಲ್ಲಿರುವಂತೆ ನಮೂನೆ-1 ರಲ್ಲಿ ಹಾಜರುಪಡಿಸತಕ್ಕದ್ದು.

**7. ಕನ್ನಡ ಮಾಧ್ಯಮ ಮೀಸಲಾತಿ:-**

01 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವವರು ಪ್ರಮಾಣ ಪತ್ರವನ್ನು ಅರ್ಜಿಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 15.12.2015ರೊಳಗೆ ಚಾಲ್ತಿಯಲ್ಲಿರುವಂತೆ ಸದರಿ ಶಾಲೆಯ ಮುಖ್ಯೋಪಧ್ಯಾಯರಿಂದ ಅಧಿಸೂಚನೆಯಲ್ಲಿನ ಅನುಬಂಧ-6ರ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.

**8. ಯೋಜನಾ ನಿರಾಶ್ರಿತ ಮೀಸಲಾತಿ:-**

ಸರ್ಕಾರದ ಆಧಿಸೂಚನೆ ದಿನಾಂಕ:23.11.2000ರ ಅನುಬಂಧ-7 ರ ನಮೂನೆಯಲ್ಲಿ ಸಂಬಂಧಪಟ್ಟ ತಹಶೀಲ್ದಾರರಿಂದ ಅರ್ಜಿಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.

**9. ಮಾಜಿ ಸೈನಿಕರ ಮೀಸಲಾತಿ:-**

ಅರ್ಜಿಯಲ್ಲಿ ಮಾಜಿ ಸೈನಿಕರ ಮೀಸಲಾತಿಯನ್ನು ಕೋರಿರುವ ಅಭ್ಯರ್ಥಿಗಳು ಸೇವೆಯಿಂದ ಬಿಡುಗಡೆಯಾದ ನಂತರ ನೀಡಿದ ಡಿಸ್ಚಾರ್ಜ್ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.

**10. ಅನುಚ್ಛೇಧ 371(ಜೆ) ರಂತೆ ಹೈ-ಕ ಪ್ರದೇಶಕ್ಕೆ ಸೇರಿದ ಸ್ಥಳೀಯ ಅಭ್ಯರ್ಥಿಗಳ ಮೀಸಲಾತಿ ಪ್ರಮಾಣ ಪತ್ರಗಳು.**

ಹೈ-ಕ ಸ್ಥಳೀಯ ಹುದ್ದೆಗೆ ಅರ್ಜಿಸಲ್ಲಿಸುವ ಅಭ್ಯರ್ಥಿಗಳು ಹೈದರಾಬಾದ್-ಕರ್ನಾಟಕದಲ್ಲಿ ವಾಸವಾಗಿರುವ ಬಗ್ಗೆ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿಯನ್ನು ಕೋರುವ ಅಧಿಸೂಚನೆಯಲ್ಲಿ ನೀಡಿರುವ ಅನುಬಂಧ-8ರಲ್ಲಿ ಸೂಚಿಸಿರುವಂತೆ ಅನುಬಂಧ-ಎ, ಅನುಬಂಧ-ಬಿ, ಅನುಬಂಧ-ಸಿ ರಲ್ಲಿ ನೀಡಲಾದ ಯಾವುದಾದರೂ ಒಂದುನಿಗದಿತ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನುಸಕ್ಷಮ ಪ್ರಾಧಿಕಾರದಿಂದ ಅರ್ಜಿಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದು ಹಾಜರು ಪಡಿಸತಕ್ಕದ್ದು. (ಹೈ-ಕ ಸಿಂಧುತ್ವ ಪಡೆಯುವ ಸಂಬಂಧ ಅನುಬಂಧ-ಎ ಅನ್ನು ಸಲ್ಲಿಸುವುದು)

**ಷರತ್ತುಗಳು:-**

1) ಅಭ್ಯರ್ಥಿಗಳು ಮೂಲದಾಖಲೆಗಳ ಪರಿಶೀಲನಾ ಸಮಯದಲ್ಲಿ ಹಾಜರುಪಡಿಸುವ ಎಲ್ಲಾ ಮೂಲ ಪ್ರಮಾಣ ಪತ್ರಗಳನ್ನು/ **ಅನುಭವ ಪ್ರಮಾಣ ಪತ್ರಗಳನ್ನು** ಅರ್ಜಿಸಲ್ಲಿಸಲು ನಿಗದಿಪಡಿಸಿದ ಕೊನೆಯ **ದಿನಾಂಕ 15.12.2015 ರೊಳಗೆ ಪಡೆದಿರತಕ್ಕದ್ದು. ನಂತರದ ದಿನಾಂಕದಲ್ಲಿ ಪಡೆದ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.**
2) ಮೂಲ ದಾಖಲಾತಿಗಳೊಂದಿಗೆ ಸ್ವಯಂ ದೃಢೀಕೃತ ಎರಡು ಜೊತೆ ಜೆರಾಕ್ಸ್ ಪ್ರತಿಯನ್ನು ಮತ್ತು ಆನ್-ಲೈನ್ ಮುಖಾಂತರ ಸಲ್ಲಿಸಿರುವ ಡೌನ್ ಲೋಡ್ ಮಾಡಿಕೊಂಡು ಅರ್ಜಿಯ ಪ್ರತಿ, ಎರಡು ಪಾಸ್ ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ ಹಾಜರುಪಡಿಸತಕ್ಕದ್ದು.
3) ಆನ್-ಲೈನ್ ಅರ್ಜಿಯಲ್ಲಿ ಕ್ಲೇಮು ಮಾಡಿರುವ ಮೀಸಲಾತಿಗಳನ್ನು ಮಾತ್ರ ಪರಿಗಣಿಸಲಾಗುವುದು.
4) ವಿವಿಧ ಮೀಸಲಾತಿಯನ್ನು ಕೋರಿರುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ಮೂಲ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮೀಸಲಾತಿಯನ್ನು ತಿರಸ್ಕರಿಸಲಾಗುವುದು.
5) ಮೂಲ ದಾಖಲೆಗಳ ಪರಿಶೀಲನೆಯನ್ನು ಗಣಕೀಕೃತ ತಂತ್ರಾಂಶದಲ್ಲಿ ನಿರ್ವಹಿಸುತ್ತಿರುವುದರಿಂದ ಎಲ್ಲಾ ಮೂಲದಾಖಲೆಗಳನ್ನು ಪರಿಶೀಲನಾ ಸ್ಥಳದಲ್ಲಿಯೇ ಕಡ್ಡಾಯವಾಗಿ ಹಾಜರುಪಡಿಸುವುದು ಮತ್ತು ಯಾವುದೇ ದಾಖಲೆಗಳನ್ನು ಹಾಜರುಪಡಿಸಲು ಮತ್ತೊಂದು ಅವಕಾಶ ನೀಡಲಾಗುವುದಿಲ್ಲ.

**<u>ವಿಶೇಷ ಸೂಚನೆ:-</u> ಮೂಲ ದಾಖಲೆಗಳ ಪರಿಶೀಲನೆಗೆ ನಿಗದಿಪಡಿಸಿದ ದಿನಾಂಕದಂದೇ ಕಡ್ಡಾಯವಾಗಿ ಹಾಜರಾಗತಕ್ಕದ್ದು, ಗೈರು ಹಾಜರಾದವರಿಗೆ ಮತ್ತೊಂದು ಅವಕಾಶವನ್ನು ನೀಡಲಾಗುವುದಿಲ್ಲ ಮತ್ತು ಗೈರು ಹಾಜರಾದ ಅಭ್ಯರ್ಥಿಗಳನ್ನುಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು.**

Shreeroopa 31/3/17

**ಮುಖ್ಯ ಆಡಳಿತಾಧಿಕಾರಿಗಳು,**
ಆರೋಗ್ಯ ಮತ್ತು ಕು.ಕ.ಸೇವೆಗಳು.